ಮಲೆನಾಡು ಪ್ರದೇಶದಲ್ಲಿ ಹುಲಿಗಳಿಂದ ವ್ಯವಸಾಯಗಾರರಿಗೆ ಆಗಿರುವ ತೊಂದರೆ ಬಗ್ಗೆ

೩೬೯. ಶ್ರೀ ಹೆಚ್. ಜಿ. ಗೋದಂಡೇಗೌಡ. (ಶೃಂಗೇರಿ).— ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಲೆನಾಡಿನಲ್ಲಿ ಹುಲಿಗಳ ಹಾವಳಿ ಜಾಸ್ತಿಯಾಗಿ ಜಾನುವಾರುಗಳನ್ನು ಕೊಂದು ವ್ಯವಸಾಯಗಾರರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಸದರಿ ರೈತರಿಗೆ ಉಪಸಂರಕ್ಷಣಾಧಿಕಾರಿಗಳು ಹಾಲಿ ಕೊಡುವ ಪರಿಹಾರ ಧನವೆಷ್ಟು, ಇದನ್ನು ಜಾಸ್ತಿ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಜಿ. ಎಸ್. ಬಾಗಲಕೋಟಿ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ರೈತರಿಗೆ ಉಪ ಸಂರಕ್ಷಣಾಧಿಗಳು ಹಾಲಿ ಕೊಡುವ ಪರಿಹಾರ ಈ ಕೆಳಕಂಡಂತೆ ವಿತ್ತಾಧಿಕಾರದ ಪ್ರಕಾರ ಇರುತ್ತೆ.

ಅ) ಹುಲಿ ಹಾಗೂ ಚಿರತೆಗಳಿಂದ ಜಾನುವಾರುಗಳಿಗೆ ಸಾವು ಅಥವಾ ಗಾಯಗೊಂಡಲ್ಲಿ ಪರಿಹಾರ	ರೂ. ೫೦೦–೦೦
ಆ) ಮೃತಪಟ್ಟಲ್ಲಿ ಮಂತ್ರ ಗಾಯಗಳಾದಲ್ಲಿ	ರೂ. ೨೦೦೦–೦೦

ಪರಿಹಾರಧನ ಹೆಚ್ಚಿಸುವ ಬಗ್ಗೆ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ತರೀಕೆರೆ ತಾಲ್ಲೂಕಿನಲ್ಲಿ ಬೆಳೆಸಿರುವ ಸಸಿಗಳ ಬಗ್ಗೆ

೬೦೭. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).— ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬-೮೭ ಮತ್ತು ೧೯೮೭–೮೮ನೇ ಸಾಲುಗಳಲ್ಲಿ ತರೀಕೆರೆ ತಾಲ್ಲೂಕಿನಲ್ಲಿ ಎಷ್ಟು ಸಸಿಗಳನ್ನು ಬೆಳೆಸಲಾಗಿದೆ ಹಾಗೂ ತಗುಲಿದ ವೆಚ್ಚವೆಷ್ಟು ?

ಶ್ರೀ ಜಿ. ಎಸ್. ಬಾಗಲ್‌ಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ತರೀಕೆರೆ ತಾಲ್ಲೂಕಿನಲ್ಲಿ ೧೯೮೬–೮೭ನೇ ಸಾಲಿನಲ್ಲಿ ಬೆಳೆಸಲಾಗಿರುವ ಸಸಿಗಳ ಸಂಖ್ಯೆ ೧೩,೫೮,೦೦೦ ಇದಕ್ಕೆ ತಗುಲಿದ ವೆಚ್ಚ ರೂ. ೩,೯೬,೫೮೫–೦೦.

೧೯೮೭–೮೮ನೇ ಸಾಲಿನಲ್ಲಿ ಒಟ್ಟು ೧೮.೫೦ ಲಕ್ಷ ಸಸಿಗಳನ್ನು ಬೆಳೆಸುವ ಗುರಿಯನ್ನು ಹೊಂದಿದೆ.

ಮಲೆನಾಡು ಪ್ರದೇಶದಲ್ಲಿ ಸಿ ಮತ್ತು ಡಿ ವರ್ಗದ ಬಗ್ಗೆ

೬೬೪. ಶ್ರೀ ಹೆಚ್. ಬಿ. ಗೋವಿಂದೇಗೌಡ (ಶೃಂಗೇರಿ).— ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಲೆನಾಡು ಪ್ರದೇಶವಾದ ಕೊಪ್ಪ ನರಸಿಂಹ ರಾಜಪುರ ಶೃಂಗೇರಿ ತಾಲ್ಲೂಕುಗಳಲ್ಲಿ ಅರಣ್ಯ ಇಲಾಖೆಯವರು 'ಸಿ' ಮತ್ತು 'ಡಿ' ವರ್ಗದ ಜಮೀನು ಅಳತೆ ಮಾಡಿ ವರ್ಗೀಕರಿಸುವಾಗ ವ್ಯವಸಾಯಗಾರರ ಮನೆಯ ಪಕ್ಕದವರಿಗೂ ಜಮೀನಿನ ಹತ್ತಿರದವರಿಗೂ ಅಳತೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?